
SERVICE ABOVE SELF



Rotary

विश्वमित्रः

ವಿಶ್ವಮಿತ್ರ

VISHWAMITHRA

Weekly House Bulletin of Rotary Club Shimoga, R.I. Dist. 3182

Rotary THE MAGIC OF ROTARY 2024-25

Rtn. Stephanie A. Urchick
RI President 2024-25

Rtn. CA Dev Anand
District Governor 2024-25

Rtn. K. Sooryanarayana Udpa
President, Mob: 99009 66114

Rtn. N.G. Usha
Secretary, Mob : 81975 92278

Rtn. M. Madhavachar
Bulletin Editor, Mob: 98862 73495

We meet every Wednesday at 6.45p.m. at Rotary Youth Centre, Sowlanga Road, L.B.S.Nagar, Shivamogga- 577 204

ಸಂಪುಟ – 67 | ಸಂಚಿಕೆ –41 | ದಿನಾಂಕ : 09–04–2025

**ದಿನಾಂಕ: 09.04.2025 ರಂದು ನಮ್ಮ ಕ್ಲಬ್‌ನ ಸದಸ್ಯರು ಹಾಗೂ ಮಾಜಿ ಸಹಾಯಕ ಗವರ್ನರ್ ಆಗಿದ್ದಂತಹ ರೊ.ಟಿ.ಕೆ. ಮಹಾಬಲೇಶ್ವರ ಭಟ್ ಇವರಿಂದ ಕ್ಲಾಸಿಫಿಕೇಶನ್ ಟಾಕ್ ಏರ್ಪಡಿಸಲಾಗಿತ್ತು. ಅವರ ಕ್ಲಾಸಿಫಿಕೇಶನ್ – ಲೈಫ್ ಇನ್ಶೂರೆನ್ಸ್ ಆಗಿದ್ದು ಎಲ್ ಐ ಸಿ ಯಲ್ಲಿ ಅಭಿವೃದ್ಧಿ ಅಧಿಕಾರಿಯಾಗಿ ಕಾರ್ಯ ನಿರ್ವಹಿಸಿದ್ದಾರೆ. ಅಂದು ವೇದಿಕೆಯಲ್ಲಿ ಮುಖ್ಯ ಅತಿಥಿಯಾಗಿ ರೊ.ಟಿ.ಕೆ.ಎಂ.ಭಟ್ ಜೊತೆಗೆ ಅಧ್ಯಕ್ಷರಾದ ರೊ.ಕೆ.ಸೂರ್ಯನಾರಾಯಣ ಉಡುಪರು ಮತ್ತು ಕಾರ್ಯದರ್ಶಿ ರೊ.ಎನ್.ಜಿ. ಉಷಾರವರು ಉಪಸ್ಥಿತರಿದ್ದರು.**










ಕಾರ್ಯಕ್ರಮವು ಶ್ರೀಮತಿ ಶ್ರೀದೇವಿ ಭಟ್‌ರವರ "ಕೌಸಲ್ಯ ನಂದನರಾಮ್ ರಾಘವ ರಘುಕುಲ ರಾಮ್" ಎಂಬ ಸುಶ್ರಾವ್ಯ ಹಾಡಿನೊಂದಿಗೆ ಪ್ರಾರಂಭವಾಯಿತು. ಅಧ್ಯಕ್ಷರಾದ ರೊ.ಕೆ.ಸೂರ್ಯ ನಾರಾಯಣ ಉಡುಪರು ಎಲ್ಲರನ್ನೂ ಸ್ವಾಗತಿಸಿದರು. ಕಾರ್ಯದರ್ಶಿ ರೊ.ಎನ್. ಜಿ. ಉಷಾರವರು ಹುಟ್ಟು ಹಬ್ಬದ ಶುಭಾಶಯಗಳನ್ನು ಮತ್ತು ಆಗಿರುವ ಕಾರ್ಯಗಳ ವರದಿಗಳನ್ನು ನೀಡಿದರು. ರೊ. ವೆಂಕಟರಮಣ ಜಿ. ಹೆಗಡೆಯವರು ಮುಖ್ಯ ಅತಿಥಿಗಳ ಪರಿಚಯ ಮಾಡಿದರು.

ನಂತರ ಮುಖ್ಯ ಅತಿಥಿಗಳಾದ ರೊ.ಟಿ.ಕೆ.ಎಂ. ಭಟ್‌ರವರು ಮಾತನಾಡಿದರು. ರೋಟರಿಯಲ್ಲಿ ಸಮಾಜವಾದವಿದೆ. 1995 ರಿಂದಲೂ ನಾನು ರೋಟರಿ ಕಂಡುಕೊಂಡದ್ದು ಇದನ್ನೇ. ಹಾಜರಾತಿಯ ಬಗ್ಗೆ ತಿಳಿಸಿದ ಅವರು ರೋಟರಿಯಲ್ಲಿ ಹಾಜರಾತಿ ಈ ಸಂದರ್ಭದಲ್ಲಿ ಕಡಿಮೆಯಾಗಿರುತ್ತೆ ಸರಿ. ಜುಲೈನಲ್ಲಿ ಅದು ಸರಿಯಾಗುತ್ತದೆ. ರೋಟರಿಯಲ್ಲಿ ಕ್ಲಾಸಿಫಿಕೇಷನ್ ಟಾಕ್ ಬಹಳ ಮುಖ್ಯವಾಗಿರುತ್ತದೆ. ಕ್ಲಾಸಿಫಿಕೇಷನ್‌ನಿಂದಲೇ ರೋಟರಿ ನಡೆದಿದೆ. ಇಲ್ಲಿ ಪ್ರತಿಯೊಬ್ಬರೂ ವೃತ್ತಿ ಪರರಿದ್ದಾರೆ. ರೋಟರಿ ಸಭೆ 20 ನಿಮಿಷ ಸ್ನೇಹ ಮಿಲನ 20 ನಿಮಿಷ ಮುಖ್ಯ ಅತಿಥಿಗಳ ಮಾತು ಮತ್ತು 20 ನಿಮಿಷಗಳು ರೋಟರಿಯಕಾರ್ಯಕ್ರಮವಿರಬೇಕು. ಆದರೆ ಇಲ್ಲಿ ಮಾತೊಂದಿದೆ. 'ದೈವ ಬಿಟ್ಟವನು ಹೆಣ ಹೊರಬೇಕು' ಎಂಬ ಗಾದೆಯಂತೆ ಇಲ್ಲಿ ಎಲ್ಲವೂ ಅಧ್ಯಕ್ಷರೇ ಮಾಡಬೇಕಿದೆ ಎಂದರು.

ಭಗವದ್ಗೀತೆಯ 9 ನೇ ಅಧ್ಯಾಯದಲ್ಲಿ 22 ನೇ ಶ್ಲೋಕ – 'ಅನನ್ಯಾಂಶ್ಚಿಂತೋಮಾಮ್ ಏ ಜನಃ ಪರ್ಯುಪಾಸತೆ ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಮ್ ವಹಾಮ್ಯಹಮ್' ಯಾರು ಏಕಮನಸ್ಸಿನಿಂದ ನನ್ನನ್ನೇ ಪೂಜಿಸುವರೊ ಅವರ ಯೋಗಕ್ಷೇಮ ನನ್ನ ಜವಾಬ್ದಾರಿ ಎಂಬುದು. ಅದು ಎಲ್.ಐ.ಸಿಯ ನಮ್ಮ ಘೋಷ ವಾಕ್ಯವಾಗಿದೆ. ನಮ್ಮ ಎಲ್.ಐ.ಸಿಯ ಪ್ರೀಮಿಯಂನ್ನು ಭಕ್ತಿಯಿಂದ ಕಟ್ಟಿದರೆ ನಿಮ್ಮ ಯೋಗಕ್ಷೇಮ ನಮ್ಮದಾಗುತ್ತದೆ ಎಂದರು.

ವೇದಗಳ ಕಾಲದಲ್ಲೂ ಇನ್ಶುರೆನ್ಸ್ ಇತ್ತು. ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ಸ್ ಸಮಾಜದಲ್ಲಿ ಅವರುಗಳ ಸಮಾರಂಭಕ್ಕೆ ಮುಯ್ಯಿ ತೀರಿಸುವುದು ಎಂಬುದು ಈಗಲೂ ಇದೆ. ಉಡುಪಿಯ ಪರ್ಯಾಯಕ್ಕೆ ಹೊರೆಕಾಣಿಕೆ ಬರತ್ತೆ. ಇವುಗಳೆಲ್ಲ Sharing the Risk ಎನ್ನುವಂತೆ ಆಗಿದೆ. 18 ನೇ

## ಈ ವಾರ

**ದಿನಾಂಕ: 16–04–2025, ಬುಧವಾರ ಸಂಜೆ 6:45 ರಿಂದ**

**Chief Guest : Rtn. Nagesh M.V.**

**Proprietor - Navyashree**

**Topic: Protect Environment**

**Save the Planet - Earth**

**ದಯವಿಟ್ಟು ರೋಟರಿ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ**

ಸ್ಥಳ: **ರೋಟರಿ ಯುವ ಕೇಂದ್ರ**, ಸವಳಂಗ ರಸ್ತೆ, ಶಿವಮೊಗ್ಗ









ಶತಮಾನದಲ್ಲಿ ಇನ್ಶೂರೆನ್ಸ್ ಎನ್ನುವುದು ಬಂತು. ಆಗ ಹಡಗುಗಳು ಸರಕುಗಳನ್ನು ಸಾಗಣಿಕೆ ಮಾಡುವುದಕ್ಕೆ ಇನ್ಶುರೆನ್ಸ್ ಮಾಡುತ್ತಿದ್ದರು.

1956ರಲ್ಲಿ ವಿತ್ತ ಮಂತ್ರಿಗಳಾದ ಶ್ರೀ ದೇಶ್‌ಮುಖ್‌ರವರು ಈ ಎಲ್.ಐ.ಸಿ.ಯನ್ನು ಪ್ರಾರಂಭಿಸಲು ಅನುವು ಮಾಡಿಕೊಟ್ಟರು. ಜನರಲ್ ಇನ್ಶೂರೆನ್ಸ್‌ಗಳು ಸಹ ಇದ್ದು ಅವುಗಳಲ್ಲಿ ಪ್ರಮುಖವಾದದು ಓರಿಯಂಟಲ್ ಇನ್ಶೂರೆನ್ಸ್‌ನ್ಯೂ ಇಂಡಿಯಾ ಇನ್ಶೂರೆನ್ಸ್ ಮುಂತಾದುವುಗಳು. ಇಲ್ಲಿ ಉಳಿತಾಯದ ಬಗ್ಗೆಯೂ ಸೇರ್ಪಡೆಗೊಳಿಸಿದ್ದಾರೆ. ಇಲ್ಲಿ ಬೇಗ ತೀರಿ ಹೋಗುವ ಹಾಗೂ ಬಹಳ ವರ್ಷಗಳು ಬದುಕುವವರಿಗಾಗಿ ಪಾಲಿಸಿಗಳು ಲಭ್ಯವಿದೆ. ಇಲ್ಲಿ ಬಡ್ಡಿ ಮತ್ತು ಬೋನಸ್ ಸೇರಿದರೆ ಸುಮಾರು 8% ಲಾಭವಿದೆ. ಇಲ್ಲಿ ಪೆನ್‌ಶನ್ ಪಾಲಿಸಿಗಳು ಲಭ್ಯವಿದೆ. ಎಲ್.ಐ.ಸಿ.ಗೆ ಓನರ್ ಇಲ್ಲ. ಇದಕ್ಕೆ ಬರುವ ಲಾಭಾಂಶದಲ್ಲಿ 10% ಸರ್ಕಾರಕ್ಕೆ ಕೊಡಬೇಕು. ನಮ್ಮ ಪ್ರಾಫಿಟ್ ಮಾರ್ಜಿನ್ 3 ನೇ ಸ್ಥಾನದಲ್ಲಿದೆ. ಈಗ ಯಾವುದೇ ಇನ್ಶುರೆನ್ಸ್‌ಗೆ ಐ.ಆರ್.ಡಿ.ಎ ನಿಯಂತ್ರಣವಿದೆ. ನುರಿತ ಸಿಬ್ಬಂದಿಗಳಿದ್ದಾರೆ. ಇಲ್ಲಿ ಬಿಸಿನೆಸ್‌ಗೋಸ್ಕರ ಕೆಲಸ ಮಾಡಬೇಕು. ಸರ್ಕಾರದ ಗ್ಯಾರಂಟಿ ಇದೆ.

ಪೆನ್ಶನ್ ಪ್ಲಾನ್ ಇದೆ. ಇದರಿಂದ ಹಲವು ಜನರಿಗೆ ಒಳ್ಳೆಯದಾಗಿದೆ. ನಮ್ಮಲ್ಲಿಂದ ಕ್ಯಾನ್‌ವಾಸ್ ಮಾಡಿದ್ದು ಕೆಲವೊಮ್ಮೆ ಜನರಿಗೆ ತಪ್ಪು ಅಭಿಪ್ರಾಯವಾಗಿದೆ ಎಂದರು. ನಮ್ಮ ಪ್ರತಿನಿಧಿಗಳು ಪ್ರಾಡಕ್ಟ್‌ಗಳನ್ನು ಸರಿಯಾಗಿ ವಿವರಿಸುವುದೇ ಇಲ್ಲ. ಇಲ್ಲಿ ಪ್ರತಿನಿಧಿಗಳ ವ್ಯಕ್ತಿತ್ವದ ಆಧಾರದ ಮೇಲೆ ವ್ಯವಹಾರ ಆರಂಭವಾಗಿರುತ್ತದೆ. ಖಾಸಗಿಯವರ ಹತ್ತಿರ ಬಂಡವಾಳವಿಲ್ಲ. ಆದರೂ ಅವರು ಕಂಪನಿಗಳನ್ನು ನಡೆಸಿರುತ್ತಾರೆ. ಆದರೆ ನಮ್ಮ ಬಂಡವಾಳ ಸಾಕಷ್ಟು ಇದ್ದು, ಸರ್ಕಾರದ ಬೆಂಬಲ ಚೆನ್ನಾಗಿದೆ ಎಂದರು. ❖




**BOD Meeting - 10-04-2025**

## ಜನ್ಮ ದಿನದ ಶುಭಾಶಯಗಳು







*Govindaraju B K*
*13th April*

*Gayathri Sumatheendra*
*15th April*

## Rotary Information
## DISTRICT PROJECTS 2024-25

1. Awareness of Arogya Swatchatha
2. Awareness of Education & Law
3. Awareness of Green & Water
4. Awareness of Rasthe Sanchara Safety

**Rotary Club Shimoga – R.I. Dist. 3182**
**Team for the year 2025-26 – Announced by Rtn. R.Anand**

| | |
|---|---|
| Rtn. R. Anand | - President |
| Rtn. K. Sooryanarayana Udupa | - I. P. P. |
| Rtn. N. Gopinath | - President Elect |
| Rtn. Dr. Kanchan Kulkarni | - Vice President |
| Rtn. Vishwasyelburgi | - Secretary |
| Rtn. ShrikanthNadig | - Joint Secretary |
| Rtn. Laxminarayana Bhat | - Treasurer |
| Rtn. Veeranna A. Huggi | - C. L. F. (Trainer) |
| **Directors** | |
| Rtn. Suneetha Sridhar | - Club Service |
| Rtn. Senthilvelan | - Vocational Service |
| Rtn. Kishore Sheernaly | - Community Service |
| Rtn. H.S.Mohan | - International Service |
| Rtn. N.G. Usha | - Youth Service |
| Rtn. S. Manjunath | - Sargent at arms |
| Rtn. Madhavachar M. | - Bulletin Editor |
| **Chairman** | |
| Rtn. N.V.Bhat | - Membership |
| Rtn. S.G.Gopal | - TRF |
| Rtn. A. Manjunath | - Public Image |
| Rtn. K.C.Dasharath | - Polio Plus |
| Rtn. M.N.S. Mani | - IT & Web site |
| Rtn. M.V. Nagesh | - District Project |

ಈ ಕಾಲಘಟ್ಟದಲ್ಲಿ ಪಶ್ಚಿಮ ಘಟ್ಟಗಳ ಮೂಲ ಭಾಗವಾಗಿರುವ ಚಿಕ್ಕಮಗಳೂರು ಜಿಲ್ಲೆಯ ರೋಟರಿ ವಲಯ 7ರ, (ರೋಟರಿ ಅಂತರ್ರಾಷ್ಟ್ರೀಯ ಜಿಲ್ಲೆ 3182) ಪ್ರತಿಷ್ಠಿತ "ಭೂಸಿರಿ" ವಿಚಾರ ಘೋಷ್ಠಿಯನ್ನು ಸಂಯೋಜಿಸಲು ರೋಟರಿ ಕಾಫಿಲ್ಯಾಂಡ್, ಚಿಕ್ಕಮಗಳೂರು ಕ್ಲಬ್ಬಿಗೆ ನೀಡಿರುವುದು ನಮ್ಮ ಸೌಭಾಗ್ಯವಾಗಿದ್ದು ತಾವುಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಈ ವಿಚಾರ ಘೋಷ್ಠಿಯನ್ನು ಯಶಸ್ವಿಗೊಳಿಸಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇವೆ

ಈ ಮನವಿಯೊಂದಿಗೆ ನೋಂದಣಿ ಪತ್ರ ಲಗತ್ತಿಸಿದೆ. ದಯವಿಟ್ಟು ಗಮನಿಸಿ, ತಕ್ಷಣ ಸ್ಪಂದಿಸಿ, ಸಹಕರಿಸಿ

PHF Rtn.Nasir Hussain
Assistant Governor, Zone 07
Mob : 9445556336

Rtn.Prasanna Kumar
District Chairman
Preserve Planet Earth
Mob : 9481579950

Rtn.Ravindranath Naidu C J
Bhoosiri Chairman
Mob : 9844233968

Rtn.Anand M
Bhoosiri Vice Chairman
Mob : 9663477102

Rtn.Tanoj Kumar P
President
Mob : 9900143129

Rtn.Nagesh Kenjige
Secretary
Mob : 9844002370



Rotary

THE MAGIC OF ROTARY

# ಅಂತರಾಷ್ಟ್ರೀಯ ರೋಟರಿ ಜಿಲ್ಲೆ 3182


Rotary Coffeeland, Chikkamagaluru
Zone 07

## Dist. SEMINAR ON PRESERVE PLANET EARTH - 2025

ಭೂಸಿರಿ
Let the Planet Live ...



Stephanie-Urchick
R.I.President





PHF Rtn.C.A Devanand
District Governor

PHF Rtn.Nasir Hussain
Assistant Governor , Zone 07

Date
27-04-2025, Sunday

Time
9 a.m.

Venue
Honey Dewwz Resort,
Thogarihankal, Chikkamagaluru


ಆತ್ಮೀಯ ರೋಟರಿ ಮಿತ್ರರೇ

2001ರಲ್ಲಿ ಸ್ಥಾಪನೆಗೊಂಡ ರೋಟರಿ ಕಾಫಿಲ್ಯಾಂಡ್‌ಗೆ 24 ವರ್ಷಗಳ ಸಾರ್ಥಕ ಸೇವೆಯ ಇತಿಹಾಸವಿದೆ. 25ನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿರುವ ಬೆಳ್ಳಿಹಬ್ಬದ ಈ ಸುಸಂದರ್ಭದಲ್ಲಿ 2024–25ನೇ ಸಾಲಿನ PRESERVE PLANET EARTH "ಭೂಸಿರಿ" ವಿಚಾರ ಸಂಕೀರ್ಣವನ್ನು ನಡೆಸಲು ಅನುವು ಮಾಡಿಕೊಟ್ಟಿರುವ ನಮ್ಮ ನೆಚ್ಚಿನ ಜಿಲ್ಲಾ ಗವರ್ನರ್ ಆದ MPHF Rtn.ಸಿ.ಎ.ದೇವಾನಂದ್ ಅವರಿಗೆ ಹೃತ್ಪೂರ್ವಕ ಕೃತಜ್ಞತೆಗಳು.

ಮಲೆನಾಡ ತವರೂರಾದ ನಮ್ಮ ಚಿಕ್ಕಮಗಳೂರು ರಾಜ್ಯದ ಜಿಲ್ಲೆಗಳಲ್ಲಿ ವಿಶಿಷ್ಠ ತಾಣವಾಗಿದ್ದು, ನೈಸರ್ಗಿಕವಾಗಿ ಸಂಪತ್ಭರಿತ ಹಾಗೂ ಭೌಗೋಳಿಕವಾಗಿ ವಿಶಾಲ ವಿಸ್ತೀರ್ಣ ಹೊಂದಿರುತ್ತದೆ. ಜಿಲ್ಲೆಯ ಪಂಚನದಿಗಳ ಉಗಮ ಸ್ಥಾನವಾಗಿದ್ದು, ಇಡೀ ರಾಜ್ಯಕ್ಕೆ ಜೀವ ಜಲದ ಸೆಲೆಯಾಗಿರುತ್ತದೆ.

ನಿಸರ್ಗದತ್ತವಾಗಿ ರುದ್ರರಮಣೀಯ ಬೆಟ್ಟ, ಗುಡ್ಡ, ಗಿರಿ, ಶಿಖರ, ನದಿ, ಝರಿ, ತೊರೆ ಹಾಗೂ ಕಣಿವೆಗಳಿಂದ ಕೂಡಿದ್ದು, ಅಂತರ್ರಾಷ್ಟ್ರೀಯ ಮಟ್ಟದಲ್ಲಿ ಪ್ರಮುಖ ಪ್ರವಾಸಿ ತಾಣವಾಗಿ ಗುರುತಿಸಿಕೊಂಡಿರುತ್ತದೆ.


ಜಿಲ್ಲೆಯು ಭೌಗೋಳಿಕವಾಗಿ ಎಂಟು ತಾಲ್ಲೂಕುಗಳನ್ನು ಒಳಗೊಂಡಿದ್ದು, ಅವುಗಳಲ್ಲಿ ಕೊಪ್ಪ, ಮೂಡಿಗೆರೆ, ನರಸಿಂಹರಾಜಪುರ, ಕಳಸ ಹಾಗೂ ಶೃಂಗೇರಿ ತಾಲ್ಲೂಕುಗಳು ಸಂಪೂರ್ಣ ಮಲೆನಾಡಾಗಿದ್ದರೆ, ಚಿಕ್ಕಮಗಳೂರು ಅರೆಮಲೆನಾಡಿನ ಬೀಡಾಗಿದೆ, ಕಡೂರು ಹಾಗೂ ಅಜ್ಜಂಪುರ ತಾಲ್ಲೂಕುಗಳು ಬಯಲು ಸೀಮೆಯಾಗಿವೆ.



ಭತ್ತ, ರಾಗಿ, ಜೋಳ ಹಾಗೂ ತೃಣಧಾನ್ಯಗಳು ಪ್ರಮುಖ ಆಹಾರ ಪದಾರ್ಥಗಳಿಂದಿಡಿದು, ವಾಣಿಜ್ಯ ಬೆಳೆಗಳಾದ ಕಾಫಿ, ಕಾಳುಮೆಣಸು, ಅಡಿಕೆ ಹಾಗೂ ತೆಂಗು ಜನರ ಆರ್ಥಿಕ ಮೂಲ ಬೆಳೆಗಳಾಗಿವೆ.

ಪ್ರಸ್ತುತ ನಿರಂತರವಾಗಿ ಕೃಷಿ, ಕೈಗಾರಿಕೆ, ವಾಣಿಜ್ಯೋದ್ಯಮಗಳು ಹಾಗೂ ಪ್ರವಾಸಿ ತಾಣಗಳ ನಿರಂಕುಶ, ಅವೈಜ್ಞಾನಿಕ ನಿರ್ವಹಣೆಗಳಿಂದ ಪಶ್ಚಿಮ ಘಟ್ಟದ ಸೂಕ್ಷ್ಮ ಜೀವಸಂಕುಲಗಳ ಮೇಲೆ ಉಂಟಾಗುತ್ತಿರುವ ದುಷ್ಪರಿಣಾಮಗಳನ್ನು ಅವಲೋಕಿಸಬೇಕಾದ ಸುಸಂದರ್ಭದಲ್ಲಿ ಈ ವಿಚಾರ ಘೋಷ್ಠಿಯ ಒಂದು ಸಣ್ಣ ಪ್ರಯತ್ನವಾಗಿರುತ್ತದೆ.

ಈ ವಿಚಾರ ಸಂಕೀರ್ಣದಲ್ಲಿ ಹೆಸರಾಂತ ವಿಚಾರ ತಜ್ಞರು ಆಗಮಿಸಿ ಪರಿಸರ, ವಿಜ್ಞಾನ, ಆರೋಗ್ಯ, ತ್ಯಾಜ್ಯ ನಿರ್ವಹಣೆಗಳ ಬಗ್ಗೆ ವಿಚಾರ ಮಂಡನೆ ಮಾಡಲಿದ್ದಾರೆ. ಇದರಲ್ಲಿ ಭಾಗವಹಿಸುವ ಅತಿಥಿಗಳಿಗೆ ಮಲೆನಾಡು ಮತ್ತು ಬಯಲುಸೀಮೆಯ ಸ್ವಾಧಿಷ್ಠ ಊಟೋಪಚಾರದ ಆತಿಥ್ಯವನ್ನು ನೀಡಲು ನಮ್ಮ ಕಾಫೀಲ್ಯಾಂಡ್‌ನ ಸದಸ್ಯರು ಈಗಾಗಲೇ ಸಿದ್ಧತೆ ನಡೆಸಿದ್ದಾರೆ.





## ಸಂಪಾದಕೀಯ

### ಆದ್ಯತೆಯೇ ಸಾಧನೆಗೆ ದಾರಿ...

ಬುದ್ಧ ಹೇಳಿದ, 'ಪ್ರತಿಯೊಬ್ಬ ಮನುಷ್ಯನೂ ಮೋಕ್ಷವನ್ನು ಪಡೆಯಬಹುದು ಅಂತಹ ಶಕ್ತಿ ಪ್ರತಿಯೊಂದು ಜೀವಕ್ಕೂ ಇದೆ' ಎಂದು. ಶಿಷ್ಯ ಕೇಳಿದ, 'ಮೋಕ್ಷವನ್ನು ಪಡೆದುಕೊಳ್ಳುವುದೇ ಮನುಷ್ಯನ ಗುರಿಯಾದರೆ, ಎಲ್ಲ ಮನುಷ್ಯರಿಗೂ ಅದು ಏಕೆ ಸಿಗುತ್ತಿಲ್ಲ? ಅದಕ್ಕಾಗಿ ನೀನು ಸಹಾಯ ಮಾಡಬೇಕಲ್ಲವೇ?' ಎಂದು. 'ಸಹಾಯ ಮಾಡೋಣ, ಆದರೆ ಅದು ಅವರ 'ಬೇಕುಗಳ' ಪಟ್ಟಿಯಲ್ಲಿ ಇದೆಯಾ ಇಲ್ಲವಾ? ತಿಳಿಯಬೇಕು. ನಿನಗೆ ಪರಿಚಿತರಿರುವ ಎಲ್ಲರ ಹತ್ತಿರ ಹೋಗಿ, ಏನನ್ನೂ ಹೇಳದೆ, ಅವರ ಅಗತ್ಯದ ಪಟ್ಟಿಯನ್ನು ಕೇಳಿ ತೆಗೆದುಕೊಂಡು ಬಾ' ಎಂದನು ಬುದ್ಧ. ಶಿಷ್ಯ ಮನೆ ಮನೆಗಳನ್ನು ಸುತ್ತಿದ, ಕಂಡವರನ್ನೆಲ್ಲಾ ಕೆದಕಿ ಕೆದಕಿ ಕೇಳಿದ.

ಕೇಳಿದವರೆಲ್ಲಾ ಚಿನ್ನ, ಬೆಳ್ಳಿ, ಹಣ, ಬಂಗಲೆ, ವಸ್ತ್ರ ಹೀಗೆ ಯಾವ ಯಾವುದನ್ನೋ ಆದ್ಯತೆಯಾಗಿ ಪಟ್ಟಿ ಮಾಡಿಕೊಟ್ಟರು. ಶಿಷ್ಯನಿಗೆ ತಲೆಕೆಟ್ಟು ಹೋಯಿತು. ಜಗತ್ತಿನ ಎಲ್ಲ ಜೀವಗಳ ಉದ್ಧರಣ ಆಗಬೇಕೆಂದು ಬುದ್ಧನನ್ನು ಪ್ರಶ್ನಿಸಿದವನಿಗೆ ಜನರ ಆದ್ಯತೆಯಲ್ಲಿ ಮೋಕ್ಷವೇ ಇಲ್ಲವಲ್ಲ ಎನ್ನುವ ಖೇದವೂ ಆಯಿತು. ಕಡೆಗೆ ಅವನು ಕೂಗಿ ಕೇಳಿದ, 'ನಿಮಗೆ ಯಾರಿಗೂ ಮೋಕ್ಷ ಬೇಡವೇ?' ಕೆಲವರು ನಕ್ಕರು, 'ಹುಚ್ಚಾ ಬದುಕಿರುವವರೆಗೂ ಹೊಟ್ಟೆ ತುಂಬಿಸಿಕೊಳ್ಳಬೇಕು. ಅದಕ್ಕೆ ಹಣಬೇಕು. ಇರಲಿಕ್ಕೆ ಮನೆ ಬೇಕು. ಅದಕ್ಕೆ ದುಡಿಯಬೇಕು. ನಿನ್ನ ಮಾತನ್ನು ಕೇಳಿದರೆ ನಾವು ಸಾಯುವುದಲ್ಲದೆ, ಮನೆಯಲ್ಲಿರುವವರನ್ನೆಲ್ಲಾ ಸಾಯಿಸ ಬೇಕಾಗುತ್ತದೆ' ಎಂದರು.

ಶಿಷ್ಯ ಸಪ್ಪಗೆ ಮುಖಮಾಡಿ ಬುದ್ಧನ ಹತ್ತಿರ ಬಂದು ಪಟ್ಟಿಯನ್ನು ಇಡುತ್ತಾನೆ. ಕಿರುನಗೆಯಿಂದ ಬುದ್ಧ ಆ ಪಟ್ಟಿಯನ್ನು ಕೈಗೆತ್ತಿಕೊಂಡು ನೋಡುತ್ತಾನೆ. ಆ ಪಟ್ಟಿಯಲ್ಲಿ ನೂರಾರು ಜನರ ನೂರಾರು ಅಪೇಕ್ಷೆಗಳ ರಾಶಿಯಿದೆ. ಮೋಕ್ಷ ಎನ್ನುವ ಪದವೇ ಇರಲಿಲ್ಲ. ಬುದ್ಧ ಕೇಳಿದ, 'ನಿನ್ನ ಪಟ್ಟಿಯಲ್ಲಿರುವ ಜನರಿಗೆ ಮೋಕ್ಷದ ಅಪೇಕ್ಷೆಯೇ ಇಲ್ಲವಲ್ಲ' ಅದಕ್ಕೆ ಶಿಷ್ಯ, 'ಅದೇ ಗುರುವೇ ನನಗೂ ಅಚ್ಚರಿಯಾಗುತ್ತಿರುವುದು, ಪ್ರತಿಯೊಬ್ಬ ಮನುಷ್ಯನೂ ಮೋಕ್ಷವನ್ನು ಸಾಧಿಸಬಲ್ಲವನಾಗಿದ್ದರೆ, ಅದೇಕೆ ಅವನ ಪಟ್ಟಿಯಲ್ಲಿ ಇಲ್ಲ? ಇವರಿಗೆಲ್ಲಾ ಮೋಕ್ಷ ದೊರೆಯುವುದು ಹೇಗೆ? ಅದರ ಬಗ್ಗೆ ಯೋಚನೆ ಮಾಡದೆ ಇದ್ದರೆ ಅವರು ಮೋಕ್ಷಕ್ಕೆ ಅನರ್ಹರೇ?' ಎಂದ.

ಬುದ್ಧ ನಕ್ಕ, 'ನಿಜ, ಮೋಕ್ಷ ಮಾತ್ರವಲ್ಲ, ಯಾವುದೇ ಆದರೂ ಅದರ ಬಗ್ಗೆ ಯೋಚಿಸದೆ ಹೋದರೆ ಅದು ಸಿಗಲಾರದು. ಸಿಗಲಿಲ್ಲ ಎಂದ ಮಾತ್ರಕ್ಕೆ ಅವನಿಗೆ ಅದನ್ನು ಪಡೆಯುವ ಯೋಗ್ಯತೆ ಇಲ್ಲ ಎಂದಲ್ಲ. ಹೊರಗಿನ ಅಪೇಕ್ಷೆಗಳನ್ನು ಬಿಟ್ಟು ಯಾರು ಮೋಕ್ಷದ ಆಕಾಂಕ್ಷಿಗಳಾಗಿರುತ್ತಾರೋ ಅವರು ಅದನ್ನು ಗಳಿಸಿಕೊಳ್ಳುತ್ತಾರೆ. ಹೊರಗಿನ ವಸ್ತುಗಳ ಪ್ರಲೋಭನೆಗೆ ಬಿದ್ದವನು ಅದನ್ನು ಮರೆತುಬಿಡುತ್ತಾನೆ. ಹೀಗಾಗಿ ಅದು ಅವನ ಬಳಿಗೆ ಬರುವುದಿಲ್ಲ. 'ನನಗೆ ನಿಶ್ಚಿತವಾಗಿ ಗೊತ್ತಿದೆ ಯಾರು ಬೇಕಾದರೂ ಮೋಕ್ಷವನ್ನು ಪಡೆದುಕೊಳ್ಳಬಲ್ಲರು. ಆದರೆ ಎಲ್ಲರೂ ಮೋಕ್ಷಾಕಾಂಕ್ಷಿಗಳು ಹೌದಾ ಅಲ್ಲವಾ ಗೊತ್ತಿಲ್ಲ' ಎನ್ನುತ್ತಾನೆ.



ಬುದ್ಧ ತನಗೆ ಗೊತ್ತಿಲ್ಲದ್ದನ್ನು ಗೊತ್ತಿಲ್ಲವೆಂದು ಹೇಳುತ್ತಿದ್ದ. ಗೊತ್ತಿಲ್ಲದ್ದನ್ನು ಗೊತ್ತಿಲ್ಲ ಎಂದರೆ ಮನುಷ್ಯ ದೊಡ್ಡವನಾಗಿಬಿಡುತ್ತಾನೆ. ಅದೇ ಜ್ಞಾನೋದಯ. ಹುಡುಕಾಟದಲ್ಲಿ ಇದೇ ಮಹತ್ವದ್ದು ಅಲ್ಲವೇ...?

**ರೊ. ಎಂ. ಮಾಧವಾಚಾರ್**

## *Rotary Information*

## THE OBJECT OF ROTARY

The Object of Rotary is to encourage and foster the ideals of service as a basis of worthy enterprise and in particular, to encourage and foster:

**01.** *FIRST*
The development of acquaintance as an opportunity for service;

**02.** *SECOND*
High ethical standards in business and professions; the recognition of the worthiness of all useful occupations; and the dignifying of each Rotarian's occupation as an opportunity to serve society;


**03.** *THIRD*
The application of the ideal of service in each Rotarian's personal, business/professional, and community life;

**04.** *FOURTH*
The advancement of international understanding, goodwill, and peace through a world fellowship of business and professional persons united in the ideal of service.

**APR**

**10. Environment**

- Protecting and restoring land, coastal, marine, and freshwater resources
- Enhancing the capacity of communities to support natural resource management and conservation
- Supporting sustainable agriculture, fishing, and aquaculture practices
- Addressing the cause of climate change by reducing the emission of greenhouse gases
- Strengthening ecosystems and communities affected by climate change
- Supporting education initiatives that promote behavior that protects the environment
- Advocating for sustainable consumption to build an economy that uses resources more efficiently
- Addressing environmental justice issues and public health concerns





**ಚತುರ್ವಿಧ ಪರೀಕ್ಷೆ– ನಮ್ಮ ಚಿಂತನೆ, ಆಡುವ ಮಾತು ಅಥವಾ ಕೃತಿಗಳಲ್ಲಿ...**

1. ಇದು **ಸತ್ಯವೇ?**
2. ಇದು ಸಂಬಂಧಪಟ್ಟ ಎಲ್ಲರಿಗೆ **ನ್ಯಾಯ ಸಮ್ಮತವೇ?**
3. ಇದು **ಸದ್ಭಾವನೆ** ಮತ್ತು **ಉತ್ತಮ ಸ್ನೇಹ ಸಂಬಂಧವನ್ನು** ಬೆಳೆಸಬಲ್ಲುದೇ ?
4. ಇದು ಸಂಬಂಧಪಟ್ಟ ಎಲ್ಲರಿಗೆ **ಪ್ರಯೋಜನಕಾರಿಯೇ?**

## ಚಿಂತನ

**ಕೆಟ್ಟ ಕೆಲಸ ಮಾಡಿದವರಿಗೆ ಒಳಿತಾಗುವುದಿಲ್ಲ.**
**ಒಳ್ಳೆಯ ಕೆಲಸ ಮಾಡಿದವರಿಗೆ ಕೆಡುಕಾಗುವುದಿಲ್ಲ.**
**ಏಕೆಂದರೆ ಭಗವಂತನ ಅಕೌಂಟ್ಸ್‌ನಲ್ಲಿ**
**ಡಿಸ್ಕೌಂಟ್ ಇರುವುದಿಲ್ಲ....!**

– ರೊ. ಕೆ. ಸೂರ್ಯನಾರಾಯಣ ಉಡುಪ



To,

*Book Post*

ಮುದ್ರಣ: ರಾಯಲ್ ಪ್ರಿಂಟರ್ಸ್, ಶಿವಮೊಗ್ಗ, 98862 73495